# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 08/2022 |
| ಸಿ.ಡಬ್ಲ್ಯೂ | : 03 |
| ಪಿ.ಡಬ್ಲ್ಯೂ | : 03 |
| ಸಾಕ್ಷಿಯ ಹೆಸರು | : ಬಾಷಾಸಾಬ ಅಲಿಸಾಬ ಬಡೇಸಾಬನವರ |
| ವಯಸ್ಸು | : 55 ವರ್ಷ |
| ಉದ್ಯೋಗ | : ಚಾಲಕ. |
| ವಾಸ ಸ್ಥಳ | : ಹುಬ್ಬಳ್ಳಿ |

ದಿನಾಂಕಃ 30/08/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯವಿದೆ. ಚಾಸಾ-1 ಮತ್ತು 2 ರವರ ಪರಿಚಯ ಇದೆ. ಸಾಕ್ಷಿ ನೋಡಿ ಗುರುತಿಸಿದ ಪಂಚನಾಮೆಯನ್ನು ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-3(ಬಿ)** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2014 ರಲ್ಲಿ ನವಲಗುಂದದ ಬಸ್ತಿ ಗುಡಿಯ ಹತ್ತಿರ ಚಾಸಾ-1 ಮತ್ತು ಆರೋಪಿತರಿಗೂ ಆದ ಜಗಳಕ್ಕೆ ಸಂಬಂಧಿಸಿ ಬೆ.11.00 ಗಂಟೆಗೆ ನಾನು ಹಾಗೂ ಚಾಸಾ-2 ರವರು ಸಹಿ ಮಾಡಿರುತ್ತೇವೆ. ಸಾಕ್ಷಿಯು ನಿಪಿ-2 ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ತಮ್ಮ ಸಮಕ್ಷಮ ಜಪ್ತಿ ಮಾಡಿದ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ -**

ದಿಃ 27-10-2014 ರಂದು ಬೆ.08-00 ರಿಂದ 09-00 ಗಂಟೆಯವರೆಗೆ ನಿಪಿ-3 ರಂತೆ ಚಾಸಾ-1 ರವರು ತೋರಿಸಿದ ಮೇರೆಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎಸ್ ಎಂ ಎಚ್ ವಕೀಲರಿಂದ</u>**

ನಾನು ಹುಬ್ಬಳ್ಳಿಯ ಖಾಯಂ ನಿವಾಸಿ. ಚಾಸಾ-1 ನನ್ನ ಸೊಸೆ. ಚಾಸಾ-2, 4 ರಿಂದ 6 ನನ್ನ ಸಂಬಂಧಿಕರು. ನಾವೆಲ್ಲರೂ ಚಾಸಾ-1 ರವರ ಸಂಬಂಧಿಕರು ಎಂದರೆ ಸರಿ. ಚಾಸಾ-1 ರವರಿಗೆ ಸರ್ಕಾರದಿಂದ ಬಸವೇಶ್ವರ ನಗರದಲ್ಲಿ ನಿವೇಶನ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಘಟನೆ ನಡೆದ ದಿನ ಬೆ.11.00 ಗಂಟೆಗೆ ಬಂದಿರುತ್ತೇನೆ. ಘಟನೆ ನಡೆದ 4-5 ದಿನಗಳ ನಂತರ ಪಂಚನಾಮೆ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಭಾಗವಹಿಸಲು ನನಗೆ ಪೋಲೀಸರು ತಿಳಿಸಿರುವುದಿಲ್ಲ. ಪಂಚನಾಮೆಗೆ ಭಾಗವಹಿಸಲು ನನಗೆ ಚಾಸಾ-1 ರವರು ತಿಳಿಸಿರುತ್ತಾರೆ. ಬಸ್ತಿ ಓಣಿಯಲ್ಲಿ ಜೈನರ ಮನೆಗಳಿವೆ ಎಂದರೆ ಸರಿ. ಸದರಿ ಓಣಿಯಲ್ಲಿ ಮುಸ್ಲಿಂ ಜನಾಂಗದವರ ಮನೆಗಳಿವೆ ಎಂದರೆ ಸರಿ. ನಿಪಿ-2 ನ್ನು ಪೋಲೀಸರು ತೆಗೆದಿದ್ದು, ಅವರ ಹೆಸರು ನನಗೆ ಗೊತ್ತಿಲ್ಲ. ಚಾಸಾ-1 ರವರು ಇದ್ದ ಮನೆ ಆರೋಪಿಗೆ ಸಂಬಂಧಿಸಿದ್ದು ಎಂದರೆ ಸರಿ. ಘಟನಾ ಸ್ಥಳದ ಚೆಕ್ಕುಬಂದಿ ಹೇಳಲಾಗುವುದಿಲ್ಲ. ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ಸದರಿ ನಿಪಿ-3 ರಲ್ಲಿರುವ ಹೆಬ್ಬೆಟ್ಟಿನ ಗುರುತು ಯಾರದು ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರದಿದ್ದರೂ ಸಹ ಚಾಸಾ-1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲು 1 ಪ್ರಕರಣಕ್ಕೆ ಸಂಬಂಧಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**
**ನವಲಗುಂದ.**